ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಹಾಗೂ ಎಫ್.ಟಿ.ಎಸ್.ಸಿ-**1,** ಹಾವೇರಿ
ಎಸ್.ಸಿ.**18/2020**

PW- 15

CW-20

ಸಾಕ್ಷಿದಾರರ ಹೆಸರುಃ ಕೃಷ್ಣ ಕೋಳಿವಾಡ

ತಂದೆಯ ಹೆಸರುಃ ಹಣಮಂತಪ್ಪ

ವಯಸ್ಸುಃ 58 ವರ್ಷ

ಉದ್ಯೋಗಃ ವ್ಯಾಪಾರ

ಹಾಲಿ ವಾಸ ಸ್ಥಳಃ ಬಜಾರ ಓಣಿ , ಶಿಗ್ಗಾಂವ

ದಿನಾಂಕ**: 21.12.2024** ರಂದು ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದಃ

ಶಿಗ್ಗಾಂವ ಪಟ್ಟಣದ ಬಾಜಾರ್ ರಸ್ತೆಯಲ್ಲಿ ನಮಗೆ ಸೇರಿದ ಮನೆ ಮತ್ತು ಅಂಗಡಿ ಇರುತ್ತದೆ. ಸದರಿ ಮನೆಯಲ್ಲಿ ನನ್ನ ಕುಟುಂಬದ ಜೊತೆ ವಾಸವಾಗಿರುತ್ತೇನೆ. ಮೃತ ಶಾಂತಾಬಾಯಿಯು ಗೊತ್ತು ಸದರಿಯವರು ನಮ್ಮ ಮನೆಯ ಪಕ್ಕದ ಮನೆಯಲ್ಲಿ ವಾಸವಾಗಿದ್ದಳು. ಸದರಿ ಯವಳ ಗಂಡ 10 ವರ್ಷ ಗಳ ಹಿಂದೆ ಅವಳಗಿಂತ ಮುಂಚೆ ತೀರಿಕೊಂಡಿರುತ್ತಾನೆ. ಸದರಿಯವಳಿಗೆ ಚಾಸಾ-8 ರಿಂದ 12 ಮೃತ ಶಾಂತಾಬಾಯಿಯವರ ಮಕ್ಕಳು. ಚಾಸಾ-12 ಮದುವೆಯಾಗಿ ಗಂಡನ ಮನೆಯಲ್ಲಿ ಇರುತ್ತಾಳೆ. ಚಾಸಾ-8 ರಿಂದ 11 ರವರು ತಮ್ಮ ತಮ್ಮ ಕುಟುಂಬದವರೊಂದಿಗೆ ಬೇರೆ ಬೇರೆಯಾಗಿ ವಾಸವಾಗಿದ್ದರು. ಮೃತ ಶಾಂತಾಬಾಯಿ ಒಬ್ಬಳೇ ತನ್ನ ಮನೆಯಲ್ಲಿ ವಾಸವಾಗಿದ್ದಳು. ಚಾಸಾ-8 ರಿಂದ 11 ರವರು ಆಗಾಗ ಮೃತ ಸದರಿಯವಳ ಮನೆಗೆ ಬಂದು ಅವಳ ಯೋಗಕ್ಷೇಮವನ್ನು ವಿಚಾರಿಸಿರುತ್ತಿದ್ದರು. ಮೃತ ಶಾಂತಾಬಾಯಿ ಪ್ರತಿದಿನ 10.00 ಗಂಟೆಗೆ ಮಲಗುತ್ತಿದ್ದಳು.

ಈಗ್ಗೆ 5 – 6 ವರ್ಷಗಳ ಹಿಂದೆ ಆಗಸ್ಟ ತಿಂಗಳಿನ ಒಂದು ಚಾಸಾ-8 ರವರು ಮೃತ ಶಾಂತಾಬಾಯಿ ವಾಸವಾಗಿದ್ದ ಮನೆಗೆ ಬಂದು ಮನೆಯ ಒಳಗಡೆ ಹೋಗಿ ನೋಡಿದಾಗ ಮೃತ ಶಾಂತಾಬಾಯಿಯನ್ನು ಯಾರೋ ಕೊಂದಿರುವುದಾಗಿ ಗಾಭರಿಯಿಂದ ಯಾರಿಗೋ ಪೋನ ಮಾಡಿ ಹೇಳುತ್ತಿದ್ದನು. ನಾನು ಹೋಗಿ ನೋಡಿದಾಗ ಮೃತ ಶಾಂತಾಬಾಯಿಯನ್ನು ಮಂಚಕ್ಕೆ ಅವಳ ಕೈ ಕಾಲುಗಳನ್ನು ಕಟ್ಟಲಾಗಿತ್ತು. ಹಾಸಿಗೆಯ ಮೇಲೆ , ಸೀರೆಯ ಮೇಲೆ ರಕ್ತ ಚಲ್ಲಿತ್ತು. ಮೃತಳ ಆಭರಣಗಳು ಕಾಣಲಿಲ್ಲ. ಮೃತ ಶಾಂತಾಬಾಯಿಯನ್ನು ನೋಡಿದಾಗ ಅವಳ ಕೊಲೆಯಾಗಿರಬಹುದು ಎಂದು ಗೊತ್ತಾಯಿತು. ಮೃತ ಶವ ನೋಡಿ ನನಗೆ ಹೆದರಿಕೆಯಾಯಿತು. ಜನ ಸೇರಿದ್ದರು. ಪೋಲಿಸರು ಬಂದರು. ಮೃತ ಶಾಂತಾಬಾಯಿ ಮಕ್ಕಳೆಲ್ಲರೂ ಮತ್ತು ಸಂಬಂಧಿಕರೆಲ್ಲರೂ ಬಂದರು. ಪ್ರಕರಣ ದಾಖಲಾದ ಬಗ್ಗೆ ಗೊತ್ತಾಯಿತು. ಯಾರು ದೂರು ಸಲ್ಲಿಸಿರುತ್ತಾರೆಂಬುದು ನನಗೆ ಗೊತ್ತಾಗಲಿಲ್ಲ. ಪೋಲಿಸರು ನನ್ನನ್ನು ವಿಚಾರಿಸಿಲ್ಲ, ಪೋಲಿಸರ ಮುಂದೆ ನಾನು ಹೇಳಿಕೆ ನೀಡಿಲ್ಲ. ನಿಪಿ-12 ರಿಂದ 14 ಪೊಟೊಗಳಲ್ಲಿ ಸಾಕ್ಷಿಯು ಬಂಗಾರದ ಆಭರಣಗಳನ್ನು

ನೋಡಿದಾಗ ಅವುಗಳು ಮೃತ ಶಾಂತಾಬಾಯಿಗೆ ಸೇರಿದವುಗಳು ಎಂದು ನೋಡಿ ಗುರುತಿಸುತ್ತಾರೆ. ಸಾಕ್ಷಿಗೆ ಮುಮಾ-4 ರಿಂದ 9, 12 ರಿಂದ 16 ಗಳನ್ನು ತೋರಿಸಿದಾಗ ಸದರಿಯವುಗಳು ಮೃತ ಶಾಂತಾಬಾಯಿಗೆ ಸಂಬಂದಪಟ್ಟ ವಸ್ತುಗಳು ಎಂದು ನೋಡಿ ಗುರುತಿಸುತ್ತಾರೆ. ಮೃತ ಶಾಂತಾಬಾಯಿ ಅವಳ ಸಾವಿನ ಹಿಂದಿನ ದಿನ ರಾತ್ರಿ 10.00 ಕ್ಕೆ ಮಲಗಿರಬಹುದು. ಒಂದು ವಾರದ ನಂತರ ಪೋಲಿಸರಿಂದ ನನಗೆ ಆರೋಪಿ ಅವನ ಹೆಂಡತಿ ಮೃತ ಶಾಂತಾಬಾಯಿಯನ್ನು ಕೊಲೆ ಮಾಡಿದ ಬಗ್ಗೆ ನನಗೆ ಗೊತ್ತಾಯಿತು. ಸದರಿ ವಿಷಯ ಹೊರತು ಪಡಿಸಿ ನನಗೆ ಹೆಚ್ಚಿನ ವಿಷಯ ಗೊತ್ತಿಲ್ಲ. ನಾನು ಈ ಬಗ್ಗೆ ಪೋಲಿಸರ ಮುಂದೆ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದರಿಂದ ಸಾಕ್ಷಿಯ ಪಾಟೀ ಸವಾಲಿಗೆ ಅನುಮತಿ ನೀಡಲಾಗಿದೆ)

<u>ಪಾಟೀ ಸವಾಲುಃ ವಿಶೇಷ ಸರ್ಕಾರಿ ಅಭಿಯೋಜಕರಿಂದಃ</u>

ತಾಃ 17.08.2019 ರಂದು ಮುಂಜಾನೆ 8.30 ರ ಸುಮಾರಿಗೆ ಚಾಸಾ-8 ರವರಿಂದ ಮೃತ ಶಾಂತಾಬಾಯಿಯ ಕೊಲೆಯಾದ ವಿಷಯ ಮೊದಲ ಬಾರಿಗೆ ನನಗೆ ಗೊತ್ತಾಯ್ತು ಎಂದರೆ ಸರಿ. ಆಗ ನಾನು ಶಾಂತಾಬಾಯಿ ತನ್ನ ಮನೆಯ ನಡುಮನೆಯಲ್ಲಿ ಮಂಚದ ಮೇಲೆ ಅಂಗಾತ ಮಲಗಿದ್ದು , ಅವಳ ಕೈಗಳನ್ನು ಸೀರೆಯಿಂದ ಮಂಚಕ್ಕೆ ಕಟ್ಟಿ , ಕುತ್ತಿಗೆಯನ್ನು ಸಹ ಸೀರೆಯಿಂದ ಬಿಗಿದು ಅದೇ ಸೀರೆಯಿಂದ ಕಣ್ಣುಗಳನ್ನು ಸಹ ಕಟ್ಟಲಾಗಿತ್ತು ಎಂದರೆ ನಾನು ನೋಡಿಲ್ಲ ಎಂದು ನುಡಿಯುತ್ತಾರೆ. ಮೃತ ಶಾಂತಾಂಬಾಯಿ ಬಾಯಿಂದ ರಕ್ತ ಬಂದಿತ್ತು ಎಂದರೆ ಸರಿ. ಅವಳ ಎಡಗಲ್ಲದ ಮೇಲೆ ಗಾಯಗಳಾಗಿದ್ದವು ಎಂದರೆ ಸರಿ. ಶಾಂತಾಬಾಯಿ ಮಂಚದ ಪಕ್ಕದಲ್ಲಿ ರಕ್ತಹತ್ತಿದ ತಲೆದಿಂಬು ಬಿದ್ದಿತ್ತು ಎಂದರೆ ಸರಿ. ಅವಳು ಧರಿಸಿದ್ದ ಸೀರೆ ಲಂಗ ಅಸ್ತವ್ಯಸ್ತವಾಗಿದ್ದವು ಎಂದರೆ ಸರಿ. ಮೃತ ಶಾಂತಾಬಾಯಿ ಕೊಲೆಯಾದ ಬಗ್ಗೆ ಚಾಸಾ-1 ರವರು ಈ ಬಗ್ಗೆ ದೂರು ಸಲ್ಲಿಸಿರುವುದು ನನಗೆ ಗೊತ್ತಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಘಟನೆಯ ಕುರಿತು ನನಗೆ ಗೊತ್ತಿರುವ ಕುರಿತು ಪೋಲಿಸರ ಮುಂದೆ ಹೇಳಿರುತ್ತೇನೆ ಎಂದರೆ ಸರಿ. ಮೇಲಿನ ಎಲ್ಲ ವಿಷಯಗಳನ್ನು ನನ್ನ ಹೇಳಿಕೆಯಲ್ಲಿ ಹೇಳಿರುತ್ತೇನೆ ಎಂದರೆ ಸರಿ. ನಂತರ ತಾಃ 06.09.2019 ರಂದು ಆರೋಪಿ ಮತ್ತು ಅವನ ಹೆಂಡತಿ ಮೃತ ಶಾಂತಾಬಾಯಿಯನ್ನು ಕೊಲೆ ಮಾಡಿದ ವಿಷಯ ಮೊದಲ ಬಾರಿಗೆ ಗೊತ್ತಾಗಿರುತ್ತದೆ ಎಂದರೆ ಸರಿ. ಆರೋಪಿಯು ತನ್ನ ಹೆಂಡತಿ ಜೊತೆ ಸೇರಿ ಮೃತ ಶಾಂತಾಬಾಯಿ ಮನೆಯ ಮೇಲಿನ ಅಟ್ಟದ ಕೋಣೆಯನ್ನು ಬಾಡಿಗೆ ಕೇಳುವ ನೆಪ ಮಾಡಿಕೊಂಡು ಆಗಾಗ ಹೋಗಿ ಬಂದು ಮಾಡುತ್ತಾ ಇದ್ದರು ಎಂದು ನನಗೆ ಗೊತ್ತಾಯಿತು ಎಂದರೆ ಸರಿ. ತಾಃ 16.08.2019 ರಂದು ರಾತ್ರಿ 11.30 ರ ಸುಮಾರಿಗೆ ಆರೋಪಿಯು ತನ್ನ ಹೆಂಡತಿಯೊಂದಿಗೆ ಮೃತ ಶಾಂತಾಬಾಯಿ ಮನೆಗೆ ಬಂದು ಅವಳ ಮೈಮೇಲಿನ ಆಭರಣಗಳನ್ನು ಕಿತ್ತುಕೊಳ್ಳಲು ಪ್ರಯತ್ನ ಮಾಡಿ ಅವಳು ಕೊಡದೇ ಇದ್ದಾಗ ಆರೋಪಿ ಮತ್ತು ಆತನ ಹೆಂಡತಿ ಸೇರಿ ಮೃತ ಶಾಂತಾಬಾಯ ಕೈಗಳನ್ನು ಮಂಚಕ್ಕೆ ಕಟ್ಟಿ , ಕಣ್ಣಿಗೆ ಕೈಗೆ ಅದೇ ಸೀರೆಯಿಂದ ಕಟ್ಟಿ , ತಲೆದಿಂಬಿದಿಂದ ಅವಳ ಮುಖಕ್ಕೆ ಒತ್ತಿ ಉಸಿರುಗಟ್ಟಿಸಿ ಸಾಯಿಸಿ ಈಗ ತೋರಿಸಿದ ನಿಪಿ-12 ರಿಂದ 14 ರಲ್ಲಿ ಕಂಡು ಬರುವ ಬಂಗಾರ ಬಳೆ ಮತ್ತು ಸರವನ್ನು ಕದ್ದೊಯ್ದರು ಎಂದು ನನಗೆ ಗೊತ್ತಾಯಿತು ಎಂದರೆ ಸರಿ.

ಆರೋಪಿತರು ಸದರಿ ಆಬರಣಗಳನ್ನು ಮನೆಯಲ್ಲಿಟ್ಟು ತಮ್ಮ ಮಕ್ಕಳನ್ನು ಮುಂಚಿತವಾಗಿ ಹುಬ್ಬಳ್ಳಿಗೆ ಕಳುಹಿಸಿ ತಾನು ಸಹ ಹುಬ್ಬಳ್ಳಿಗೆ ಹೋಗಿ ಮಕ್ಕಳಿಗೆ ವಿಷಯ ಹೇಳಿ ಸದರಿ ಕೃತ್ಯದಿಂದ ಭಯಗೊಂಡು ಇಬ್ಬರು ವಿಷ ಸೇವಿಸಿ ಸಾಯಲು ಪ್ರಯತ್ನ ಮಾಡಿ, ಆ ಪೈಕಿ ಆರೋಪಿಯ ಹೆಂಡತಿ ಹುಬ್ಬಳ್ಳಿಯ ಕೀಮ್ಸ್ ಆಸ್ಪತ್ರೆಯಲ್ಲಿ ಮೃತ ಪಟ್ಟಿರುತ್ತಾಳೆ ಎಂದು ಗೊತ್ತಾಗಿರುತ್ತದೆ ಎಂದರೆ ಸರಿ.

ತಾಃ 18.08.2019 ರಂದು ಹೇಳಿಕೆ ಮತ್ತು ತಾಃ 06.09.2019 ರಂದು ಮರುಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿ.

ಪಾಟೀ ಸವಾಲು ಆರೋಪಿ ಪರ ವಕೀಲರಿಂದಃ

ಅರ್ಜಿ ಸಲ್ಲಿಸಿ ಸಮಯಾವಕಾಶ ಕೇಳಿದ್ದು, ಸಮಯಾವಕಾಶ ನೀಡಲಾಯ್ತು.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ಎಫ್.ಟಿ.ಎಸ್.ಸಿ-1
ಹಾವೇರಿ.